**ಶ್ರೀ ಗುರುಭ್ಯೋ ನಮಃ**

## ಶ್ರೀ ಶ್ರೀಮದ್ ಗಂಗಾಧರೇಂದ್ರಸರಸ್ವತೀ ಮಹಾಸ್ವಾಮಿಗಳವರ ವ್ಯಕ್ತಿಚಿತ್ರ

**ಡಾ॥ ಮಹಾಬಲೇಶ್ವರ ಭಟ್ಟ, ಕಿರುಕುಂಭತ್ತಿ.**

ವ್ಯಕ್ತಿಯನ್ನು ಚಿತ್ರಿಸಬಹುದೇ ಹೊರತು, ಶಕ್ತಿಯನ್ನಲ್ಲ. ಆದರೂ ಶಕ್ತಿಯೇ ವ್ಯಕ್ತಿಯಾಗಿ ವ್ಯಕ್ತಗೊಂಡಾಗ, ಅದನ್ನು ಚಿತ್ರಿಸುವ ಪ್ರಯತ್ನವನ್ನು ಮಾಡಬಹುದೆಂದು ಅನಿಸುತ್ತದೆ. ಅದರಿಂದ ಚಿತ್ರಿಸುವವನ ಚಿತ್ತದಲ್ಲಿ ಆ ದಿವ್ಯ ಶಕ್ತಿಯ ಅಲೌಕಿಕ ಚಿತ್ರ ಮೂಡಬಹುದೆಂಬ ಪ್ರತೀಕ್ಷೆ. ಈ ಹಿನ್ನೆಲೆಯಲ್ಲಿ ಪರಮಪೂಜ್ಯ ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀಮದ್ ಗಂಗಾಧರೇಂದ್ರಸರಸ್ವತೀ ಮಹಾಸ್ವಾಮಿಗಳವರ ವ್ಯಕ್ತಿಚಿತ್ರವನ್ನು ಅಕ್ಷರಗಳಲ್ಲಿ ವಿನ್ಯಾಸಗೊಳಿಸುವ ಪ್ರಯತ್ನವಿದು.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ನಿಡಗೋಡು ಗ್ರಾಮದಲ್ಲಿ ಶ್ರೀಮತೀ ಶರಾವತೀ ಮತ್ತು ಶ್ರೀ ಶಿವರಾಮ ಭಟ್ಟ ದಂಪತಿಗಳ ಸುಪುತ್ರರಾಗಿ ಶ್ರೀ ಪರಮೇಶ್ವರ ಭಟ್ಟರ ಜನನ. ಪಾರಂಪರಿಕವಾದ ಸುಸಂಸ್ಕೃತ ಕೌಟುಂಬಿಕ ಹಿನ್ನೆಲೆ, ಹಾಸುಹೊಕ್ಕಾದ ವೈದಿಕ ಸಂಪ್ರದಾಯ, ಜನ್ಮಾಂತರೀಯ ಸಾಧನೆಯ ಸುಗಂಧ, ಇವುಗಳೆಲ್ಲವೂ ಮೇಳೈಸಿದ ಅಲೌಕಿಕ ಪ್ರಭಾವಲಯವು ಅದಾಗಲೇ ಶ್ರೀಯುತರನ್ನು ತೇಜಃಪುಂಜವಾಗಿ ಪ್ರಕಾಶಿಸುವಂತೆ ಮಾಡಿತ್ತು. ಸನಾತನ ವೈದಿಕ ಶಿಕ್ಷಣದತ್ತ ಸಹಜವಾದ ಒಲವನ್ನು ಹೊಂದಿದ್ದರಿಂದ ಪ್ರಾಥಮಿಕ ಶಿಕ್ಷಣವನ್ನು ಪೂರೈಸಿದ ನಂತರ ಶ್ರೀಯುತರ ಚಿತ್ತವು ವೇದ-ಸಂಸ್ಕೃತ ವಿದ್ಯಾರ್ಜನೆಗೋಸ್ಕರ ಪಾಠಶಾಲೆಯನ್ನು ಪ್ರವೇಶಿಸುವಂತೆ ಪ್ರೇರಿಸಿತು. ಅಲ್ಲದೇ ಕಾಲಕ್ಕೆ ಉಚಿತವಾದ ವೇದಭಾಗಗಳನ್ನೂ, ಪ್ರಾಥಮಿಕ ಸಂಸ್ಕೃತವನ್ನೂ ಅಧ್ಯಯನ ಮಾಡಿದ ಶ್ರೀಯುತರಿಗೆ ಸಾರಸ್ವತ ಲೋಕದ ವೈಭವವನ್ನು ಇನ್ನಷ್ಟು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಉತ್ಕಟವಾದ ಇಚ್ಛೆ ಒಡಮೂಡಿತು. ಇದರ ಪರಿಣಾಮವಾಗಿ ಅನೇಕ ವಿದ್ಯಾನಿಧಿಗಳಿಗೆ ಆಶ್ರಯತಾಣವಾಗಿದ್ದ ಮೈಸೂರಿನ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅದ್ವೈತವೇದಾಂತ ಶಾಸ್ತ್ರದ ಅಧ್ಯಯನವು ಪ್ರಾರಂಭವಾಯಿತು. ಅಲ್ಲಿ ನೆಲೆಸಿರುವ ಶ್ರೀ ವಿದ್ಯಾಗಣಪತಿಯ ಅನುಗ್ರಹದಿಂದ ಶ್ರೀಯುತರ ಅಂತರಂಗದಲ್ಲಿ ಶ್ರದ್ಧಾ-ಮೇಧಾ-ಪ್ರಜ್ಞಾ ಶಕ್ತಿಗಳು ಅಪ್ರತಿಹತವಾಗಿ ಪ್ರವಹಿಸಲು ಪ್ರಾರಂಭಿಸಿದವು. ಪ್ರಾಮಾಣಿಕವಾದ ಜಿಜ್ಞಾಸೆ, ನಿರಂತರ ಅಧ್ಯಯನ ನಿಷ್ಠೆ, ದೊರೆತ ಅವಕಾಶಗಳಲ್ಲೆಲ್ಲ ವಿದ್ವಾಂಸರೊಡನೆ ಚರ್ಚೆ, ಭಾಷಣದಲ್ಲಿ ವಿದ್ಯಾರ್ಥಿಸಹಜವಾದ ಸ್ಪರ್ಧಾಮನೋಭಾವ, ಗ್ರಂಥಾಲಯಗಳ ಸದುಪಯೋಗವೇ ಮೊದಲಾದ ಸದ್ಗುಣ ಸಂಪತ್ತುಗಳಿಂದಾಗಿ ತಳಸ್ಪರ್ಶಿಯಾದ ಶಾಸ್ತ್ರಾರ್ಥ ಜ್ಞಾನವನ್ನು ಸಂಪಾದಿಸುವಂತಾಯಿತು. ಇದಕ್ಕೆ ಅನೇಕ ಸಂಗತಿಗಳು ಸಾಕ್ಷಿಯಾದವು. ಪ್ರಧಾನವಾಗಿ ಅಧ್ಯಯನಕ್ಕೆ ಆಯ್ದುಕೊಂಡ ಅದ್ವೈತವೇದಾಂತ ಶಾಸ್ತ್ರದ ಜೊತೆಯಲ್ಲಿ ನ್ಯಾಯವೇ ಮೊದಲಾದ ಇನ್ನಿತರ ಉಪಕಾರಕ ಶಾಸ್ತ್ರಗಳಲ್ಲಿಯೂ ಹಿರಿಯ ವಿದ್ವಾಂಸರಿಂದ ಪರಿಣತಿಯನ್ನು ಸಂಪಾದಿಸಿರುವುದು ವಿದ್ಯಾರ್ಥಿಜೀವನವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದಿರುವವರಿಗೆ ಮಾರ್ಗದರ್ಶಕವಾಗಿತ್ತು. ಇಂಥ ವೈಶಿಷ್ಟ್ಯಗಳ ಸಾಕಾರರೂಪವಾಗಿರುವ ಶ್ರೀಯುತರಲ್ಲಿ ವೈರಾಗ್ಯಸರಸ್ವತಿಯು ಗುಪ್ತಗಾಮಿನಿಯಾಗಿ ಹರಿಯುತ್ತಿದ್ದಳೆಂಬುದು ವ್ಯಕ್ತವಾಗಲು ಕಾಲವು ಪಕ್ವವಾಗಬೇಕಿತ್ತಷ್ಟೆ!

1990-ರ ಸಂದರ್ಭ. ಶ್ರೀಸ್ವರ್ಣವಲ್ಲೀ ಗುರುಪರಂಪರೆಯ 53-ನೆಯ ಯತಿಗಳಾಗಿ ಪೀಠವನ್ನಲಂಕರಿಸಿದ್ದ ಶ್ರೀಮತ್ ಸರ್ವಜ್ಞೇಂದ್ರ ಸರಸ್ವತೀ ಮಹಾಸ್ವಾಮಿಗಳವರು ತಮ್ಮ ತಪಃಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು, ಕೈವಲ್ಯ ಪದವಿಯನ್ನು ಹೊಂದಿದರು. ಗುರುವಿನ ಕರುಣೆಯ ನೆರಳಿನಲ್ಲಿ ಜೀವಿಸುತ್ತಿದ್ದ ಶಿಷ್ಯಸ್ತೋಮಕ್ಕೆ ಸಂತಾಪದ ಅನುಭವ ಉಂಟಾಗುವಂತಾಯಿತು. ಆದರೆ ಈ ಸಂತಾಪವು ಬಹಳ ಕಾಲ ಉಳಿಯಲಿಲ್ಲ. ಮಹಾತ್ಮರ ಮಾತನ್ನು ಅಥವಾ ಮಾತಿನ ಸಿದ್ಧಿಯನ್ನು ಪರೀಕ್ಷಿಸಬಾರದು, ಅದು ತಾನಾಗಿಯೇ ಪ್ರಕಟಗೊಳ್ಳುತ್ತದೆ ಎಂಬುದಕ್ಕೆ ಮುಂದಿನ ಸಂಗತಿಗಳು ಸಾಕ್ಷಿಯಾದವು. 'ಪೂಜ್ಯರೇ ತಮ್ಮ ವಯೋಮಾನ ಹಾಗೂ ಅನಾರೋಗ್ಯಗಳಿಂದಾಗಿ ಶ್ರೀಮಠದ ಗುರುತರ ಜವಾಬ್ದಾರಿಯನ್ನು ನಿರ್ವಹಿಸುವುದು ಕಷ್ಟಸಾಧ್ಯವಾಗಬಹುದು. ಆದ್ದರಿಂದ ಒಬ್ಬ ಉತ್ತರಾಧಿಕಾರಿಯನ್ನು ಗೊತ್ತುಪಡಿಸಿ ಅನುಗ್ರಹಿಸಬೇಕು' ಎಂದು ಶಿಷ್ಯರು ಮತ್ತೆ ಮತ್ತೆ ಪ್ರಾರ್ಥಿಸಿದಾಗ, 'ಹೆದರಬೇಡಿ! ಅತ್ಯಂತ ಯೋಗ್ಯ ವ್ಯಕ್ತಿಯೇ ಈ ಪೀಠವನ್ನು ಮುಂದೆ ಅಲಂಕರಿಸುತ್ತಾನೆ' ಎಂದು ಶ್ರೀ ಸರ್ವಜ್ಞೇಂದ್ರರು ನುಡಿದಿದ್ದರು ಎಂಬುದನ್ನು ಪ್ರತ್ಯಕ್ಷದರ್ಶಿಗಳು ನಿತ್ಯವೂ ಸ್ಮರಿಸಿಕೊಳ್ಳುವಂತಾಯಿತು. ಶ್ರೀ ಸರ್ವಜ್ಞೇಂದ್ರರ ಮಾತಿನ ಮಹಿಮೆಯಿಂದಲೋ, ಶಿಷ್ಯಭಕ್ತರ ಭಾಗ್ಯವು ಉದಯಿಸಿದ್ದರಿಂದಲೋ 1991-ರ ಫೆಬ್ರವರಿ 2-ರಂದು ಕಂಚೀ ಕಾಮಕೋಟೀ ಪೀಠದ ಶ್ರೀ ಪರಮಾಚಾರ್ಯರ ಆಶೀರ್ವಾದದೊಂದಿಗೆ, ಶ್ರೀ ಜಯೇಂದ್ರ ಸರಸ್ವತೀ ಮಹಾಸ್ವಾಮಿಗಳವರ ಅಮೃತಹಸ್ತದಿಂದ ಸಂನ್ಯಾಸದೀಕ್ಷೆಯನ್ನು ಪಡೆದಾಗ ಶ್ರೀ ಸ್ವರ್ಣವಲ್ಲೀ ಗುರುಪರಂಪರೆಯ 54-ನೆಯ ಯತಿವರೇಣ್ಯರ ಪೀಠಾರೋಹಣವು ಸಂಪನ್ನವಾಯಿತು.

ಪರಮಪೂಜ್ಯರು 'ಶ್ರೀಮದ್ ಗಂಗಾಧರೇಂದ್ರ ಸರಸ್ವತೀ' ಎಂಬ ಅಭಿಧಾನದೊಂದಿಗೆ ಶ್ರೀ ಸ್ವರ್ಣವಲ್ಲೀ ಗುರುಪರಂಪರೆಯ ವ್ಯಾಖ್ಯಾನ ಸಿಂಹಾಸನವನ್ನೇರಿದ ಆ ಸಂಧರ್ಭವು ಈ ಸ್ಥಳದಲ್ಲಿ ಸುವರ್ಣಲತೆಯೊಂದು ಚಿಗುರೊಡೆದ ಐತಿಹಾಸಿಕ ಕ್ಷಣವಾಗಿತ್ತು. ಜಗನ್ನಿಯಾಮಕನ ನಿರ್ದೇಶನದಂತೆ ಶ್ರೀ ಸರ್ವಜ್ಞೇಂದ್ರರು ಬಾಹ್ಯಪೀಠದಿಂದೆದ್ದು ಶಿಷ್ಯರ ಅಂತರಂಗ ಪೀಠವನ್ನು ಸೇರಿದಾಗ, ಈವರೆಗೆ ಅಂತರಂಗದಲ್ಲಿಯೇ ಅನಭಿವ್ಯಕ್ತ ಸ್ವರೂಪದಿಂದಿದ್ದ ಗುರು ತತ್ತ್ವವೊಂದು ಸಾಕಾರ ರೂಪದಿಂದ ಬಾಹ್ಯ ಪೀಠವನ್ನಲಂಕರಿಸಿತೋ ಎಂಬಂತೆ ಪರಮಪೂಜ್ಯರ ಪೀಠಾರೋಹಣವು ಶಿಷ್ಯರಲ್ಲಿ ಸಾತ್ತ್ವಿಕವಾದ ಸಂಚಲನವನ್ನುಂಟುಮಾಡಿತು. ಅಲ್ಲದೇ ಶ್ರೀ ಶಂಕರಾಚಾರ್ಯರನ್ನು ಪ್ರತ್ಯಕ್ಷವಾಗಿ ನೋಡಲರಿಯದ ಭಕ್ತರ ಅಂತರಂಗಕ್ಕೆ ಶ್ರೀ ಶಂಕರರನ್ನು ನೋಡಿದ ಧನ್ಯತೆಯನ್ನುಂಟುಮಾಡಿದ ಆ ಅವಿಸ್ಮರಣೀಯ ಕ್ಷಣವು ಭಾಗ್ಯವಂತರಿಗಷ್ಟೇ ಲಭಿಸಿತ್ತೆಂದರೆ ಅತಿಶಯೋಕ್ತಿಯಾಗಲಾರದು. ಇಂದಿಗೂ ಪರಮಪೂಜ್ಯರ ದರ್ಶನವನ್ನು ಪಡೆದ ಸುಸಂಸ್ಕೃತರು 'ಶ್ರೀ ಶಂಕರರನ್ನೇ ನೋಡಿದಂತಾಯಿತು' ಎಂದು ಉದ್ಗರಿಸುತ್ತಾರೆ.

ಲೋಕದ ಸ್ಥಿತಿಗೋಸ್ಕರ ಧರ್ಮಸಂಸ್ಥಾಪಕನಾದ ಭಗವಂತನು ವಿವಿಧ ರೂಪಗಳಿಂದ ಅವತರಿಸಿದಂತೆಯೇ, ಧರ್ಮಸಂಸ್ಥಾಪನಾಚಾರ್ಯರಾದ ಶ್ರೀ ಶಂಕರಭಗವತ್ಪಾದರು ವಿವಿಧ ಧರ್ಮಪೀಠಗಳನ್ನು ಸ್ಥಾಪಿಸಿ, ಆಯಾ ಪರಂಪರೆಯಲ್ಲಿ ಧರ್ಮಸಂಸ್ಥಾಪಕ ಯತಿಗಳ ರೂಪದಿಂದ ಅವತರಿಸುತ್ತಾರೆ ಎಂಬುದು ನಮ್ಮ ನಂಬಿಕೆ. ಶ್ರೀಮದ್ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರ ವಿಶಿಷ್ಟವಾದ ನಡೆ-ನುಡಿಗಳು ನಮ್ಮ ಈ ನಂಬಿಕೆಗೆ ನೀಡುವ ಪ್ರಮಾಣಪತ್ರದಂತಿದೆ. ಪೀಠಾರೋಹಣಕ್ಕಿಂತ ಪೂರ್ವದಲ್ಲಿಯೇ ಶ್ರೀಸಂಸ್ಥಾನದ ಪದಾಧಿಕಾರಿಗಳು ಸಂದರ್ಶಿಸಿ 'ಕಠೋರವಾದ ಸಂನ್ಯಾಸವನ್ನು ನಿಷ್ಠೆಯಿಂದ ಆಚರಿಸಿ, ಸುದೀರ್ಘ ಪರಂಪರೆಯುಳ್ಳ ಶ್ರೀಮಠ ಹಾಗೂ ಶಿಷ್ಯಸಮುದಾಯವನ್ನು ಮುನ್ನಡೆಸಿಕೊಂಡು ಹೋಗಲು ಸಾಧ್ಯವೇ?' ಎಂದು

ಪ್ರಶ್ನಿಸಿದಾಗ, ಪರಮಪೂಜ್ಯರ ಮುಖದಿಂದ ಹೊರಹೊಮ್ಮಿದ ಗಂಭೀರವಾಣಿ - 'ಶ್ರೀಮಠದ ಯಾವತ್ತೂ ಪರಂಪರೆಗೆ ಧಕ್ಕೆ ಬಾರದಂತೆ ನಡೆದುಕೊಳ್ಳುತ್ತೇನೆ ಎಂಬುದಾಗಿ ದೇವರ ಎದುರಿನಲ್ಲಿ ನಿಂತು ನನ್ನ ತಂದೆ-ತಾಯಿಗಳಿಗೆ ಮಾತು ಕೊಟ್ಟಿದ್ದೇನೆ. ಅದನ್ನೇ ಈಗಲೂ ಪುನರುಚ್ಚರಿಸುತ್ತೇನೆ.' ಅಂತೆಯೇ ಈ ಮಾತಿನ ಪ್ರತಿಧ್ವನಿಯೋ ಎಂಬಂತೆ, ಪೀಠವನ್ನಲಂಕರಿಸಿದ ನಂತರ ಪ್ರಥಮವಾಗಿ ಶಿಷ್ಯಸ್ತೋಮವನ್ನುದ್ದೇಶಿಸಿ 'ಅಭಯಪ್ರದಾನ' ಆಶೀರ್ವಚನವನ್ನು ನೀಡುವಾಗಲೂ ಶ್ರೀಮುಖದಿಂದ ಬಂದ ಮಾತು - 'ಸನಾತನ ಧರ್ಮವನ್ನು ಸಂರಕ್ಷಿಸುವ ಮೂಲಕ ಈ ಪರಂಪರೆಯನ್ನೂ, ಶಿಷ್ಯಭಕ್ತರನ್ನೂ ರಕ್ಷಿಸಬೇಕಾಗಿದೆ. ಶ್ರೀಮಠದಲ್ಲಿ ಅನೂಚಾನವಾಗಿ ನಡೆದುಕೊಂಡು ಬರುತ್ತಿರುವ ಉಪಾಸನೆಗಳನ್ನೂ, ಅರ್ಚನೆಗಳನ್ನೂ, ಅನುಷ್ಠಾನಗಳನ್ನೂ ಯಾವುದೇ ನ್ಯೂನತೆಗಳುಂಟಾಗದಂತೆ ತಪ್ಪದೇ ಆಚರಿಸಿಕೊಂಡು ಹೋಗುತ್ತೇವೆ, ಇತೋಪ್ಯತಿಶಯವಾಗಿ ಇವು ವರ್ಧಿಸುತ್ತವೆ ಎಂದು ಧೈರ್ಯವಾಗಿ ಹೇಳುತ್ತೇವೆ. ಇದರಲ್ಲಿ ಸಂಶಯ ಬೇಡ, ಭಯ ಬೇಡ.' ಈ ಮಾತು ನಿಜಕ್ಕೂ ಆಸ್ತಿಕ ಭಕ್ತರಿಗೆ ಶಾಶ್ವತವಾದ ಅಭಯವನ್ನು ನೀಡಿತ್ತು. ಸ್ವರ್ಣವಲ್ಲೀ ಯತಿಪರಂಪರೆಯ 54-ನೆಯ ಈ ಪರ್ವವು ಪೀಠಾರೋಹಣದ ಪೂರ್ವದಲ್ಲಿ ಪೂಜ್ಯರು ನೀಡಿದ ಆಶ್ವಾಸನೆ ಮತ್ತು ಪೀಠಾರೋಹಣದ ನಂತರದ ಅಭಯಪ್ರದಾನ, ಈ ಎರಡು ಭದ್ರ ಕವಚಗಳಿಂದ ಸಂಪುಟಿತಗೊಂಡಿದೆ.

ಅಂದಿನಿಂದ ಇಂದಿನ ವರೆಗಿನ ಶ್ರೀ ಶ್ರೀಗಳವರ ಅಧ್ಯಾತ್ಮಸಾಧನೆ ಹಾಗೂ ಲೋಕಹಿತ ಸಾಧನೆಯ ಸೋಪಾನಗಳನ್ನು ಜನಸಾಮಾನ್ಯರು ಊಹಿಸಲೂ ಸಾಧ್ಯವಿಲ್ಲ. ಕೇವಲ 32 ವರ್ಷಗಳ ಸೀಮಿತವಾದ ಜೀವಿತದಿಂದ ಅಭಿವ್ಯಕ್ತರಾದವರು ಶ್ರೀ ಶಂಕರರು. ಅದಕ್ಕೂ ಮುಂದಿನ ಅವರ ಅಭಿವ್ಯಕ್ತಿ ಹೇಗಿರಬಹುದಿತ್ತು? ಎಂದು ಆಲೋಚಿಸುವಾಗ ನಮ್ಮ ಮನಸ್ಸಿನಲ್ಲಿ ಮೂಡುವ ದಿವ್ಯ ಚಿತ್ರ ಶ್ರೀಮದ್ ಗಂಗಾಧರೇಂದ್ರಸರಸ್ವತೀ ಮಹಾಸ್ವಾಮಿಗಳವರದ್ದು. ಪರಂಪರೆಯಿಂದಲೂ, ಸ್ವಯಂ ಆಚರಣೆಯಿಂದಲೂ ಪ್ರಾಪ್ತವಾದ ಅದ್ಭುತ ತಪೋನಿಷ್ಠೆ, ಏಕಾಗ್ರತೆ, ದೇವತಾರಾಧನೆಯಲ್ಲಿ ತಾದಾತ್ಮ್ಯ, ದೈವೀಸಾನ್ನಿಧ್ಯದಲ್ಲಿ ಮೈಮರೆಯುವಿಕೆಯೇ ಮೊದಲಾದವುಗಳು ಪರಮಪೂಜ್ಯರಲ್ಲಿ ಕಂಡುಬರುವ ಆಧ್ಯಾತ್ಮಿಕ ಸಾಧನೆಯ ಸೋಪಾನಗಳಾಗಿವೆ. ಶಿಷ್ಯ-ಭಕ್ತರಲ್ಲಿ ಧರ್ಮದ ಜಾಗೃತಿಯನ್ನು ಮೂಡಿಸಬೇಕೆಂಬ ನಿರಂತರ ಕಳಕಳಿ, ಪ್ರಯತ್ನ, ಲೋಕದ ಜನರಿಗೆ ಶಾಂತಿಯುತವಾದ ಸ್ವಸ್ಥ ಜೀವನವನ್ನು ಕಲ್ಪಿಸಬೇಕೆಂಬ ವಿಶಾಲವಾದ ಮನೋಭಾವ, ಸಾಮಾಜಿಕ ಪಿಡುಗಗಳನ್ನು ನಿವಾರಿಸುವಲ್ಲಿ ಅವಿರತವಾದ ಪ್ರಯತ್ನ, ಇವೇ ಮೊದಲಾದ ಲೋಕಹಿತ ಸಾಧನೆಯ ಸೋಪಾನಗಳು ಪರಮಪೂಜ್ಯರಲ್ಲಿ ಕಂಡುಬರುತ್ತವೆ.

'ಮೋಕ್ಷಸಾಧನಸಾಮಗ್ರ್ಯಾಂ ಭಕ್ತಿರೇವ ಗರೀಯಸೀ' 'ಅಧ್ಯಾತ್ಮಸಾಧನೆಗೆ ಸರಳವೂ, ಸಮರ್ಪಕವೂ ಆದ ಸಾಧನ ಭಕ್ತಿ'. ಶ್ರೀ ಶಂಕರರಿಂದ ಈ ಪರಂಪರೆಗೆ ಅನುಗ್ರಹಿಸಲ್ಪಟ್ಟ ಸ್ಫಟಿಕಮಯವಾದ ಶ್ರೀ ಚಂದ್ರಮೌಳೀಶ್ವರ, ಈ ಕ್ಷೇತ್ರದ ಅಧಿದೇವತೆಯಾದ ಶ್ರೀ ಲಕ್ಷ್ಮೀನೃಸಿಂಹ, ಹಾಗೂ ಶ್ರೀ ಸರ್ವಜ್ಞೇಂದ್ರರ ನಿಷ್ಠೆಗೆ ಒಲಿದು ನೆಲೆಸಿದ ಜಗನ್ಮಾತೆ, ಅವ್ಯಾಜ ಕರುಣಾಮೂರ್ತಿ ಶ್ರೀ ರಾಜರಾಜೇಶ್ವರೀ, ಈ ಮೂರು ಪ್ರಧಾನ ದೇವತೆಗಳ ಆರಾಧನೆಯ ವಿಷಯದಲ್ಲಿ ಯಾವುದೇ ಅಡೆತಡೆಗಳೂ ಶ್ರೀ ಶ್ರೀಗಳವರನ್ನು ಬಾಧಿಸಲಿಲ್ಲ. 'ತಸ್ಯ ಹ ನ ದೇವಾಶ್ಚ ನಾಭೂತ್ಯಾ ಈಶತೇ' 'ಪರಮ ವೈರಾಗ್ಯದಿಂದ ಅಧ್ಯಾತ್ಮದಲ್ಲಿ ನೆಲೆನಿಂತಿರುವ ನಿಷ್ಠನಿಗೆ ದೇವತೆಗಳೂ ಕೂಡ ಅಹಿತವನ್ನು ಉಂಟುಮಾಡಲಾರರು' ಎಂಬ ಉಪನಿಷದ್ವಾಕ್ಯವನ್ನು ಶ್ರೀ ಶ್ರೀಗಳವರಲ್ಲಿ ಅನ್ವಯಿಸಿಕೊಳ್ಳಬಹುದೆಂದು ಅನಿಸುತ್ತದೆ. ಪ್ರಣವೋಪಾಸನೆಯ ಮೂಲಕ ಬ್ರಹ್ಮಭಾವವನ್ನು ಹೊಂದುವ ಪಥದಲ್ಲಿ ಧೀರವಾದ ನಡೆಯುಳ್ಳವರಾಗಿಯೂ ಲೋಕಸಂಗ್ರಹಕ್ಕೋಸ್ಕರ ಸಗುಣ ದೇವತಾರಾಧನೆಯಲ್ಲಿಯೂ ನಿಷ್ಠೆಯನ್ನು

ಸಾಧಿಸುತ್ತಿರುವುದು ಶ್ರೀಗಳವರ ಸಮತೆ-ಸಮನ್ವಯಗಳ ಪಕ್ವತೆಗೆ ದ್ಯೋತಕವಾಗಿದೆ. 'ಅಂತರಂಗದಲ್ಲಿ ಮೋಕ್ಷಸಾಧನೆಯನ್ನೂ, ಬಹಿರಂಗದಲ್ಲಿ ಲೋಕಹಿತವನ್ನೂ ಸಾಧಿಸಬೇಕಾಗಿದೆ' ಎಂಬುದಾಗಿ ವಿಶಿಷ್ಟ ಸನ್ನಿವೇಶಗಳಲ್ಲಿ ಅವರೇ ಉಲ್ಲೇಖಿಸಿದ ಮಾತಿಗೆ ಅರ್ಥವೂ ಅವರೇ ಆಗಿದ್ದಾರೆ.

ಕಳಂಕರಹಿತವಾದ ಚರಿತ್ರೆ ಮತ್ತು ಲೋಕದ ಜನರ ಕುರಿತು ಅಕಾರಣ ಕರುಣೆ, ಇವು ಮಹಾತ್ಮರಲ್ಲಿ ಸಹಜವಾಗಿಯೇ ನೆಲೆಸಿರುವ ಅಲಂಕಾರಗಳು. ಶ್ರೀಮಠದ ಭೌಗೋಳಿಕ ವ್ಯಾಪ್ತಿಯ ದೃಷ್ಟಿಯಿಂದ ಕೆಲವು ಸೀಮೆಗಳ ಜನರನ್ನು ಮಾತ್ರ ಶ್ರೀಮಠದ ಶಿಷ್ಯರೆಂದು ಕರೆಯಬಹುದು. ಆದರೆ 'ಆತ್ಮನೋ ಮೋಕ್ಷಾಯ ಜಗದ್ಧಿತಾಯ ಚ' ಎಂದು ಹೊರಟಿರುವ ಮಹಾತ್ಮರ ಅಂತರಂಗದ ವಿಸ್ತಾರಕ್ಕೆ ಸೀಮೆ ಎಂಬುದಿಲ್ಲ. ಶ್ರೀಗಳವರ ಸಮಗ್ರ ಲೋಕಹಿತದ ದೃಷ್ಟಿಯನ್ನು ಅರ್ಥೈಸಿಕೊಳ್ಳುವುದಕ್ಕೆ ಅನೇಕ ಚಿಹ್ನೆಗಳು ನಮಗೆ ಕಂಡುಬರುತ್ತವೆ. ದೇಶದ ಕಾನೂನು ಧರ್ಮದಿಂದ ಬೇರ್ಪಡುತ್ತಿರುವುದನ್ನು ಗಮನಿಸಿದ ಶ್ರೀಗಳು 'ಸಂವಿಧಾನದಲ್ಲಿ ಆಧ್ಯಾತ್ಮಿಕತೆ' ಎಂಬ ವಿಚಾರ ಗೋಷ್ಠಿಯ ಮೂಲಕ ರಾಜಕೀಯ ಮುಖಂಡರುಗಳನ್ನೂ, ಸಾಮಾಜಿಕ ಧುರೀಣರನ್ನೂ ಎಚ್ಚರಿಸಿ ರಾಷ್ಟ್ರಮಟ್ಟದಲ್ಲಿ ಜಾಗೃತಿಯನ್ನು ಮೂಡಿಸಿದರು. ವ್ಯಾವಹಾರಿಕ ಜೀವನದಲ್ಲಿ ಅತಿಯಾದ ಸಂಗವನ್ನು ಬೆಳೆಸಿಕೊಂಡ ಜನರು ಶಾಂತಿ, ಸಮಾಧಾನಗಳಿಂದ ವಂಚಿತರಾಗುತ್ತಿರುವುದನ್ನು ಮನಗಂಡ ಶ್ರೀಗಳವರು ಶ್ರೀ ಭಗವದ್ಗೀತೆಯೆಂಬ ದೈವವಾಣಿಯು ರಾಜ್ಯವ್ಯಾಪಿಯಾಗಿ ಜನರ ಕಿವಿಯಲ್ಲಿ ಅನುರಣಿಸುವಂತೆ ಮಾಡಿದರು. ಆ ಮೂಲಕ ಸಮಷ್ಟಿಧರ್ಮವು ಜಾತಿ, ಮತ, ಪಂಥಗಳೆಂಬ ಭೇದವನ್ನು ಮೀರಿದ್ದು ಎಂದು ಸ್ವಯಂ ಆಚರಣೆಯ ಮೂಲಕ ಲೋಕಕ್ಕೆ ತಿಳಿಸಿಕೊಟ್ಟರು.

ಕಾಲಘಟ್ಟದ ಪ್ರವಾಹಕ್ಕೆ ಸಿಲುಕಿದ ಶಿಷ್ಯ ಭಕ್ತರ ಜೀವನದಲ್ಲಿ ಎದುರಾಗುವ ಅದೆಷ್ಟೋ ಸಂಕಷ್ಟಗಳಲ್ಲಿ ಶ್ರೀ ಶ್ರೀಗಳವರು ಶ್ರೀರಕ್ಷೆಯಾಗಿ ನಿಲ್ಲುತ್ತಾರೆ. ಪಾತ್ರತ್ವವೊಂದಿದ್ದರೆ ದೈನ್ಯತೆಯನ್ನು ಕ್ಷಣಮಾತ್ರದಲ್ಲಿ ನೀಗಿಸುವ ಕನಕಧಾರೆಯೇ ಹರಿದುಬರುವಂತೆ ಮಾಡಿದ ಶ್ರೀ ಶಂಕರರನ್ನು ನಾವು ಸ್ಮರಿಸಿಕೊಳ್ಳುತ್ತೇವೆ. ಅಂತೆಯೇ ಪವಾಡಗಳನ್ನೂ ಮರೆಮಾಚುವ ಅಂತಃಶಕ್ತಿಯನ್ನು ಹೊಂದಿದ ಶ್ರೀ ಶ್ರೀಗಳವರು ತಮ್ಮ ಆರಾಧ್ಯ ದೇವತೆಯನ್ನು ಪ್ರಾರ್ಥಿಸುವ ಮೂಲಕ ಆರ್ತ ಶಿಷ್ಯರೆಡೆಗೆ ದೈವಾನುಗ್ರಹಧಾರೆಯನ್ನು ಹರಿಸಬಲ್ಲರು ಎಂಬುದಕ್ಕೆ ಅನೇಕ ನಿದರ್ಶನಗಳು ನಮ್ಮ ಮುಂದೆ ನಿಲ್ಲುತ್ತವೆ. ಬದುಕು-ಸಾವುಗಳ ನಡುವೆ ಹೋರಾಡುತ್ತಿದ್ದ ಭಕ್ತರಿಗೆ ಪರಮಪೂಜ್ಯರೇ ಸಂಜೀವಿನಿಯಾದ ವಿಶಿಷ್ಟ ಘಟನೆಗಳನ್ನು ನೆನಪಿಸಿಕೊಂಡು ಭಾವುಕರಾಗುವ ಶಿಷ್ಯರು ಅಲ್ಲಲ್ಲಿ ಕಾಣಸಿಗುತ್ತಾರೆ.

ಜ್ಞಾನಿಯೂ ಭಗವದ್‌ಭಕ್ತನೇ ಆಗಿರುತ್ತಾನೆ. ಆದರೂ, ಭಗವಂತನಲ್ಲಿ ಭಕ್ತಿ ಹೇಗಿರಬೇಕು? ಎಂಬುದನ್ನು ಆರ್ತನಿಗೂ (ಕಷ್ಟನಿವಾರಣೆಗಾಗಿ ಭಗವಂತನನ್ನು ಆಶ್ರಯಿಸುವವನಿಗೂ), ಜಿಜ್ಞಾಸುವಿಗೂ (ಜ್ಞಾನಕ್ಕಾಗಿ ಭಗವಂತನನ್ನು ಆಶ್ರಯಿಸುವವನಿಗೂ), ಅರ್ಥಾರ್ಥಿಗೂ (ಐಶ್ವರ್ಯಕ್ಕಾಗಿ ಭಗವಂತನನ್ನು ಆಶ್ರಯಿಸುವವನಿಗೂ) ಮಾರ್ಗದರ್ಶನ ಮಾಡುವವನು ಜ್ಞಾನಿಯೇ ಆಗಿದ್ದಾನೆ. ಏಕೆಂದರೆ ಜ್ಞಾನಿಯ ಭಕ್ತಿ ಪರಿಶುದ್ಧವಾದದ್ದು, ಪರಿಪೂರ್ಣವಾದದ್ದು ಮತ್ತು ಪರಿಪಕ್ವವಾದದ್ದು. ಶುದ್ಧವೂ, ಪೂರ್ಣವೂ, ಪಕ್ವವೂ ಆದದ್ದು ತಾನೆ, ಎಲ್ಲರಿಗೂ-ಎಂದಿಗೂ ಗ್ರಾಹ್ಯವಾಗುತ್ತದೆ. ಸಂಕಷ್ಟ ಬಂದಾಗ ಹರಕೆಯನ್ನು ಹೊತ್ತು, ಸಂಕಟದಿಂದಲಾದರೂ ತೀರಿಸುವುದೇ ಭಕ್ತಿ ಎಂಬ ಭಾವನೆಯನ್ನು ಅನೇಕರಲ್ಲಿ ಕಾಣುತ್ತೇವೆ. ''ನಾನು' 'ನನ್ನದನ್ನು' ಇಷ್ಟು ಸಮರ್ಪಿಸಿದ್ದೇನೆ, ಭಗವಂತನು ನನಗೆ ಇಷ್ಟನ್ನು ಕೊಡಬೇಕು' ಎಂಬ ಹಟವನ್ನೇ ಭಕ್ತಿ ಎಂದು ಭಾವಿಸಿದವರನ್ನೂ ಕಾಣುತ್ತೇವೆ.

ಆದರೆ ನಿಜವಾದ ಭಕ್ತಿಯ ಸ್ವರೂಪವನ್ನು ಮಹಾತ್ಮರಿಂದಲೇ ತಿಳಿದುಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ಪರಮಪೂಜ್ಯ ಶ್ರೀ ಶ್ರೀಗಳವರು ಲೋಕದ ಜನರಿಗೆ ಮಾರ್ಗದರ್ಶಕರಾಗುತ್ತಾರೆ. ಪ್ರತಿವರ್ಷವೂ ಶರನ್ನವರಾತ್ರಿಯ ಉತ್ಸವದ ಸಂದರ್ಭದಲ್ಲಿ, ಒಂಭತ್ತು ದಿನಗಳ ಕಾಲ ವಿಶೇಷವಾಗಿ ಆರಾಧಿಸಲ್ಪಟ್ಟ ಜಗನ್ಮಾತೆಯ ಸಮ್ಮುಖದಲ್ಲಿ ನಿಂತು, ದಶಮಿಯಂದು ಪರಮಪೂಜ್ಯರು ಪ್ರಾರ್ಥಿಸುವಾಗ, ಯಾವುದೋ ಒಂದು ಅಲೌಕಿಕವಾದ ವಾತಾವಾರಣವು ನಮಗರಿವಿಲ್ಲದಂತೆಯೇ ನಿರ್ಮಾಣವಾಗುವುದು ಸಾತ್ವಿಕರ ಅಂತರಂಗಕ್ಕೆ ವೇದ್ಯವಾಗಿದೆ. ಯಾವುದೇ ಮುಚ್ಚು-ಮರೆ, ಆಡಂಬರಗಳಿಲ್ಲದ, ಪ್ರಾಂಜಲ ಮನಸ್ಸಿನಿಂದ ದೈವವಾಣಿಯಲ್ಲಿ ಶ್ರೀಮುಖದಿಂದ ಹೊರಹೊಮ್ಮುವ ಪ್ರಾರ್ಥನೆಯು ನಮ್ಮ ಕಿವಿಯ ಮೇಲೆ ಬಿದ್ದಾಗ ಸಹಜವಾಗಿಯೇ ಹೃದಯ ಕರಗುತ್ತದೆ, ಕಣ್ಣು ತುಂಬಿಬರುತ್ತದೆ.

ಶ್ರೀರಾಮನ ನಡೆಯೂ, ಶ್ರೀಕೃಷ್ಣನ ನುಡಿಯೂ ಲೋಕದ ಜನತೆಗೆ ದಾರಿದೀಪವಾಗಿದೆ. ಆದರೆ ಮಹಾತ್ಮರ ನಡೆ ಮತ್ತು ನುಡಿ ಎರಡೂ ಲೋಕಕ್ಕೆ ಅನುಸರಣೀಯವಾಗಿರುತ್ತವೆ. ಅಂತೆಯೇ ಸಿದ್ಧರಲ್ಲಿ, ಸಹಜವಾಗಿ ನೆಲೆಸಿರುವ ಲಕ್ಷಣಗಳೇ ಸಾಧಕರಿಗೆ ಪ್ರಯತ್ನದಿಂದ ಅಳವಡಿಸಿಕೊಳ್ಳಬೇಕಾದ ಸಾಧನಗಳಾಗುತ್ತವೆ. 'ಯಾಸ್ತು ಸ್ವೈರಕಥಾಸ್ತೇಷಾಮುಪದೇಶಾ ಭವಂತಿ ತಾಃ' 'ಮಹಾತ್ಮರ ಸಹಜವಾದ ಮಧುರಾಲಾಪವೇ ಇತರರಿಗೆ ಉಪದೇಶಾಮೃತವಾಗುತ್ತದೆ' ಎಂಬುದು ಹಿರಿಯರ ಅನುಭವದ ಮಾತು. ಈ ಹಿನ್ನೆಲೆಯಲ್ಲಿಯೂ ಪರಮಪೂಜ್ಯರು ಸಾಧಕರಿಗೆ ಸತ್ಪಥವನ್ನು ತೋರುವ ದೀಪವಾಗಿದ್ದಾರೆ. ಆದರೆ ಆ ದೀಪದ ಬಳಿ ಸಾರಿ, ಬೆಳಕನ್ನು ಅಂತುಕೊಳ್ಳಬೇಕಾದದ್ದು ನಮ್ಮ ಕರ್ತವ್ಯವಷ್ಟೆ!

ಮನಸ್ಸಿನಲ್ಲಿಯೂ, ಮಾತಿನಲ್ಲಿಯೂ, ಕೃತಿಯಲ್ಲಿಯೂ ಏಕರೂಪತೆಯನ್ನು ಮಹಾತ್ಮರಲ್ಲಿ ಕಾಣುತ್ತೇವೆ. ಅಂತೆಯೇ ಪರಮಪೂಜ್ಯರ ಸಾಧನಾಪರ್ವಗಳನ್ನು ಗುರುತಿಸಿ, ಅವುಗಳಿಗೆ ಮೂರ್ತರೂಪವನ್ನು ಕೊಡುವಲ್ಲಿ ನಮ್ಮ ಸಾಮರ್ಥ್ಯವು ಕುಂಠಿತವಾಗಬಹುದು. ಆದರೆ ಅವರ ಸಹಜವಾದ ದೈನಂದಿನ ಚರ್ಯೆಗಳನ್ನೇ ಗುರುತಿಸುತ್ತ ಸಾಗಿದರೆ, ಅದೆಷ್ಟೋ 'ಆದರ್ಶ'ಗಳು ನಮ್ಮ ಎದುರಿಗೆ ನಿಲ್ಲುತ್ತವೆ. 'ಉತ್ತಮವಾದ ಬದುಕು ನಮ್ಮದಾಗಬೇಕಾದರೆ ಹಾಗೂ ಸದ್ಗತಿ ಉಂಟಾಗಬೇಕಾದರೆ ಉತ್ತಮವಾದ ಜನ್ಮ ನಮ್ಮದಾಗಬೇಕು. ಉತ್ತಮವಾದ ಜನ್ಮವನ್ನು ಪಡೆಯುವುದಕ್ಕೆ ಉತ್ತಮವಾದ ಮರಣವನ್ನು ಹೊಂದಬೇಕು. ಉತ್ತಮವಾದ ಮರಣವು ಬರಬೇಕೆಂದರೆ ಬದುಕಿನ ಉದ್ದಗಲಕ್ಕೂ ಭಗವಂತನ ಸ್ಮರಣೆ ಅಗತ್ಯ. ಅಂತೆಯೇ ಒಂದು ದಿನವನ್ನೇ ಬದುಕು ಎಂಬುದಾಗಿ ಸ್ವೀಕರಿಸಿದರೆ, ಆ ದಿನದ ಬದುಕು ಸ್ವಸ್ಥವಾಗಬೇಕೆಂದರೆ, ಆ ದಿನದ ಪ್ರಾತಃಕಾಲದ ಎಚ್ಚರ ಭಗವಂತನ ಸ್ಮರಣೆಯೊಂದಿಗೆ ಆಗಬೇಕು. ಎಚ್ಚರವಾಗುತ್ತಲೇ ಭಗವಂತನ ಸ್ಮರಣೆ ಉಂಟಾಗಬೇಕೆಂದರೆ, ಹಿಂದಿನ ದಿನದ ರಾತ್ರಿಯ ನಿದ್ದೆ ಭಗವಂತನ ಸ್ಮರಣೆಯೊಂದಿಗೆ ಪ್ರಾಪ್ತವಾಗಿರಬೇಕು. ಇದಕ್ಕೆ ದೈನಂದಿನ ಚಟುವಟಿಕೆಗಳ ಜೊತೆಯಲ್ಲಿ ಸದಾ ಭಗವಂತನ ಸ್ಮರಣೆ ಅಗತ್ಯ' - ಇದು ಪರಮಪೂಜ್ಯರು ತಮ್ಮ ಸಹಜವಾದ ಮಾತುಗಳಲ್ಲಿ ನಮಗೆ ಉಪದೇಶಿಸಿದ ಕರ್ಮಯೋಗ, ಜೀವನಯೋಗ. ಅಂತೆಯೇ ತ್ರಿಕಾಲದಲ್ಲಿಯೂ ಪ್ರಣವೋಪಾಸನೆ, ದಿವ್ಯ ಮಂತ್ರಗಳ ಮೂಲಕ ದೇವತಾರಾಧನೆಯಲ್ಲಿಯೇ ತತ್ಪರರಾಗುವ ಶ್ರೀ ಶ್ರೀಗಳವರು, ಲೋಕಹಿತಕ್ಕಾಗಿ ಬಹಿರ್ಮುಖರಾಗಿರುವಾಗಲೂ ಅಂತರಂಗದಲ್ಲಿ ಶ್ರೀಮನ್ನಾರಾಯಣ ಸ್ಮರಣೆಯಲ್ಲಿ ನಿರತರಾಗಿರುತ್ತಾರೆ.

ಆರ್ಷ ದರ್ಶನವಾಗಿರುವ ಯೋಗವನ್ನು ಇಂದು ವಿಶ್ವವೇ ತಲೆ ಎತ್ತಿ ನೋಡುತ್ತಿದೆ, ಮನ ಬಿಚ್ಚಿ ಸ್ವೀಕರಿಸುತ್ತಿದೆ. ಆಧಿ-ವ್ಯಾಧಿಗಳಿಂದ ವ್ಯಾಕುಲರಾದ ಜನರಿಗೆ ಯೋಗಮಾರ್ಗವನ್ನು ಅಳವಡಿಸಿಕೊಳ್ಳಬೇಕೆಂದು

ಉಪದೇಶಿಸುವ ಶ್ರೀಗಳವರು ಸ್ವಯಂ ಆಚರಣೆಯ ಮೂಲಕ 'ಅಷ್ಟಾಂಗಯೋಗಾನುಷ್ಠಾನನಿಷ್ಠ'ರಾಗಿದ್ದಾರೆ. ಸತತವಾದ ವೇದಾಂತ ಚಿಂತನೆಯೇ ಸಂನ್ಯಾಸಾಶ್ರಮದ ತಳಹದಿಯಾದರೆ, ಶಿಷ್ಯವಾತ್ಸಲ್ಯವೆಂಬುದು ಗುರುತ್ವದ ಪ್ರತೀಕವಾಗಿದೆ. ಈ ಹಿನ್ನೆಯಲ್ಲಿ ಪರಮಪೂಜ್ಯರು ಬಿಡುವಿಲ್ಲದ ತಮ್ಮ ಕಾರ್ಯವ್ಯಾಪೃತಿಯ ನಡುವೆಯೂ ಶ್ರೀ ಮಠದ ಪಾಠಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ವೇದಾಂತ ಪಾಠ-ಪ್ರವಚನವನ್ನು ಮಾಡುವ ಮೂಲಕ ಶ್ರೀ ಶಂಕರಭಗವತ್ಪಾದರಿಂದ ಪ್ರವಹಿಸಲ್ಪಟ್ಟ ಅದ್ವೈತಗಂಗೆಯಲ್ಲಿ ಅದೆಷ್ಟೋ ಶಿಷ್ಯರನ್ನು ಮಿಂದೇಳುವಂತೆ ಮಾಡುತ್ತಿರುವುದು ನಿಜಕ್ಕೂ ಶಿಷ್ಯರಾದ ನಮ್ಮ ಸೌಭಾಗ್ಯವೇ ಸರಿ.

'ಖ್ಯಾತಿ-ಲಾಭ-ಪೂಜೆ' ಇವುಗಳನ್ನು ಬಯಸದೇ ಧೀರ ನಡೆಯಲ್ಲಿ ಸಾಗುವವನ ಸಾಧನೆಗೆ ಯಾವ ವಿಘ್ನವೂ ಬರಲಾರದು ಎಂಬುದು ಶ್ರೀಗಳವರ ದೃಢವಾದ ನಿಲುವು. ಶ್ರೀ ಶಂಕರರಿಂದ ಪ್ರವರ್ತಿಸಲ್ಪಟ್ಟ ದಿವ್ಯ ಯತಿಪರಂಪರೆಯೊಂದಿಗೇ ಹಾಸುಹೊಕ್ಕಾಗಿ ಬಂದಿರುವ ಯೋಗಪರಂಪರೆಯನ್ನು ಸಮರ್ಪಕವಾಗಿ ಧರಿಸಲು ಇಂಥ ದೃಢವಾದ ನಿಲುವು ಅಗತ್ಯ. ಶ್ರೀ ಸ್ವರ್ಣವಲ್ಲೀ ಯತಿಪರಂಪರೆಯಲ್ಲಿ ಕ್ರಮವಾಗಿ ಯೋಗಪೀಠ-ರಾಜಪೀಠಗಳ ಪ್ರಭಾವವಿರುತ್ತದೆ ಎಂಬ ಪ್ರತೀತಿ ಇದೆ. ಆದರೆ ಅನುಕ್ರಮದಂತೆ ರಾಜಪೀಠವಾಗಬೇಕಿದ್ದ ಪ್ರಸ್ತುತ ಶ್ರೀಪೀಠವನ್ನು ರಾಜ-ಯೋಗ ಪೀಠವನ್ನಾಗಿಸುತ್ತಿರುವ ಪರಮಪೂಜ್ಯರ ಸಾಧನೆಗೆ ಎಂಥವರೂ ತಲೆಬಾಗಲೇಬೇಕು. ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನದ ಸಾಮಾಜಿಕ, ಸಾಂಸ್ಕೃತಿಕ ವೈಭವಗಳಿಗೆ ತಪಸ್ಸು-ಯೋಗಗಳ ಪ್ರಭಾವಲಯವನ್ನು ದೊರಕಿಸಿಕೊಟ್ಟವರು ಶ್ರೀ ಶ್ರೀಗಳವರು.

ವಿಶ್ವಕ್ಕೆ ಆಧಾರವಾಗಿರುವುದು ಧರ್ಮ ಎಂಬುದಾಗಿ ಭಗವತೀ ಶ್ರುತಿಯು ಸಾರಿದೆ. ಶಿಷ್ಯಜನರಲ್ಲಿಯೂ, ಆ ಮೂಲಕ ಸಮಾಜದಲ್ಲಿಯೂ ಧರ್ಮವು ಸ್ಥಿರವಾಗಿ ನೆಲೆಸುವಂತೆ ಮಾಡಬೇಕೆಂಬುದು ಶ್ರೀ ಶ್ರೀಗಳವರ ಸಾರ್ವಕಾಲಿಕವಾದ ಹಂಬಲ. ಅವರ ಯೋಚನೆ, ಯೋಜನೆಗಳೆಲ್ಲವೂ ಅದಕ್ಕೋಸ್ಕರವೇ ರೂಪುಗೊಳ್ಳುತ್ತವೆ ಎಂದರೆ ತಪ್ಪಾಗಲಾರದು. ಸಂಸ್ಕಾರವಿಲ್ಲದ ಮನಸ್ಸಿಗೆ ರಂಜನೆಯನ್ನುಂಟುಮಾಡುವಂತೆ ಮಾತುಗಳನ್ನಾಡುವ, ಕ್ಷಣಿಕತೃಪ್ತಿಗೆ ಕಾರಣವಾದ ಭೋಗಸಾಮಗ್ರಿಗಳನ್ನು ಪೂರೈಸುವ, ಜಿಗಿಯುವ ವಿಕ್ಷಿಪ್ತ ಮನಸ್ಸೆಂಬ ಮರ್ಕಟಕ್ಕೆ ಏಣಿಯನ್ನು ಒದಗಿಸುವ ಅದೆಷ್ಟೋ ಅವಕಾಶಗಳನ್ನು ಅನೇಕರು ಅನೇಕ ವಿಧದಿಂದ ಉಪಯೋಗಿಸಿಕೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ, ಸ್ವಯಂ ಆಚರಣೆಯ ಮೂಲಕ ಧರ್ಮಮಾರ್ಗವನ್ನು ಉಪದೇಶಿಸುವವರನ್ನು ಕಾಣುವುದೆಂದರೆ ಸೋಜಿಗವೆಂಬಂತಾಗಿದೆ. ಹೀಗಿರುವಾಗಲೂ ಯಾವುದೇ ಸಭೆ-ಸಮಾರಂಭಗಳೇ ಇರಲಿ, ಅಭಿಯಾನ-ಹೋರಾಟಗಳೇ ಇರಲಿ, ಆಪ್ತೋಪದೇಶ-ಆಶೀರ್ವಚನಗಳೇ ಇರಲಿ, ಶ್ರೀ ಶ್ರೀಗಳವರ ಮಾತಿನ ಮುಕ್ಕಾಲು ಭಾಗ ಸಮಾಜವನ್ನು ಎಚ್ಚರಿಸುವ ಧರ್ಮಸಂದೇಶವೇ ಆಗಿರುತ್ತದೆ ಎಂಬುದನ್ನು ನಾವು ಹಗುರವಾಗಿ ಪರಿಗಣಿಸುವಂತಿಲ್ಲವಷ್ಟೆ. ಅಷ್ಟೇ ಏಕೆ! ಯಾವುದೇ ಸದ್‌ಗೃಹಸ್ಥನ ಮನೆಗೆ ಶ್ರೀ ಶ್ರೀಗಳವರು ದಯಮಾಡಿಸಿದಾಗ, ಆ ಮನೆಯ ಹಿರಿಯರನ್ನು ವಿಚಾರಿಸುವ ಮಾತುಗಳು, ಕೇವಲ ಅಲ್ಲಿರುವ ಮನೆಯ ಸದಸ್ಯರನ್ನಷ್ಟೇ ಅಲ್ಲ, ಗತಿಸಿದ ವಂಶಜರನ್ನೂ ಉದ್ಧರಿಸುವುದಕ್ಕೆ ಸಮರ್ಥವಾದವುಗಳು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. 'ನಿಮ್ಮ ಮನೆಯಲ್ಲಿ ನಿತ್ಯ ಅನುಷ್ಠಾನಗಳು, ದೇವರ ಪೂಜೆ, ಸ್ತೋತ್ರಪಾರಾಯಣಗಳು ತಪ್ಪದೇ ಆಚರಿಸಲ್ಪಡುತ್ತಿದೆ ತಾನೆ? ನೈಮಿತ್ತಕವಾಗಿ ಕುಲದೇವರಿಗೆ ಸೇವೆ ಸಲ್ಲಿಸುತ್ತೀರಷ್ಟೆ? ಧರ್ಮಸಮ್ಮತವಾದ ಕೌಟುಂಬಿಕ ವ್ಯವಸ್ಥೆಯಲ್ಲಿ ಮುನ್ನಡೆಯುವುದು ತೀರಾ ಅವಶ್ಯ' – ಇವೇ ಮೊದಲಾದವುಗಳು ಆ ಮನೆಯ ದೇವರ ಸಮ್ಮುಖದಲ್ಲಿ ವಿರಾಜಮಾನರಾದ ಶ್ರೀಗಳವರ ಮುಖದಿಂದ

ಹೊರಹೊಮ್ಮುವ ಉಪದೇಶಾಮೃತವಚನಗಳು. ಇದರಿಂದ ಪ್ರಭಾವಿತರಾದ ಅದೆಷ್ಟೋ ನಾಸ್ತಿಕರೂ ಆಸ್ತಿಕರಾಗಿದ್ದಾರೆಂದರೆ, ಸಾತ್ವಿಕ ಜನತೆಯಲ್ಲಿ ಶ್ರೀಗಳವರ ಈ ದಿವ್ಯ ವಾಣಿಯು ಅದೆಂಥ ಸಂಚಲವನ್ನೂ, ಸತ್ಪರಿಣಾಮವನ್ನೂ ಉಂಟುಮಾಡಿರಬಹುದೆಂಬುದನ್ನು ನಾವು ಊಹಿಸಬಹುದು. ಹೀಗೆ ಸಮಷ್ಟಿಯಲ್ಲಿಯೂ, ವ್ಯಷ್ಟಿಯಲ್ಲಿಯೂ ಧರ್ಮಸಂಸ್ಥಾಪನೆಯನ್ನೇ ಲಕ್ಷ್ಯದಲ್ಲಿರಿಸಿಕೊಂಡಿರುವ ಸದ್ಗುರುವನ್ನೇ ಅಲ್ಲವೇ ಸಮಾಜವು ನಿರೀಕ್ಷಿಸುತ್ತಿರುವುದು?

ಒಟ್ಟಾರೆ ನಮ್ಮ ಶ್ರೀಗಳವರು ಆದರ್ಶಗಂಗೆಯನ್ನೇ ಧರಿಸಿದ ಗಂಗಾಧರೇಂದ್ರರು ಎಂಬುದನ್ನು ಅಭಿಮಾನದಿಂದಲೂ, ಶ್ರದ್ಧೆಯಿಂದಲೂ, ಭಕ್ತಿಯಿಂದಲೂ ಸ್ಮರಿಸಿಕೊಳ್ಳುವ ಸೌಭಾಗ್ಯವು ಶಿಷ್ಯರಾದ ನಮ್ಮ ಪಾಲಿಗೆ ಲಭಿಸಿದೆ. ಅವರ ವ್ಯಕ್ತಿತ್ವದಲ್ಲಿ ಅಡಕವಾಗಿರುವ ಒಂದೊಂದೂ ಆದರ್ಶಗಳೂ ಗಂಗೆಯ ಕಣಗಳಂತೆಯೇ ಪವಿತ್ರವಾದವುಗಳು. ಅವುಗಳನ್ನು 'ಇಷ್ಟು' 'ಹೀಗೆ' ಎಂದು ಅಳೆಯುವ ಪ್ರಯತ್ನವೂ, ಸಾಹಸವೂ ನನ್ನದಲ್ಲ. ಸೂರ್ಯನ ಪ್ರತಿಬಿಂಬವು ಪುಟ್ಟ ಕನ್ನಡಿಯಲ್ಲಿಯೂ ಮೂಡುತ್ತದೆ, ವಿಸ್ತಾರವಾದ ಸಮುದ್ರದಲ್ಲಿಯೂ ಮೂಡಬಹುದು. ವಾಸ್ತವಿಕವಾಗಿ ಈ ಯಾವುದೂ ಪರಿಪೂರ್ಣವಾಗಿ ಸೂರ್ಯನನ್ನು ಪ್ರತಿಬಿಂಬಿಸಲು ಸಮರ್ಥವಲ್ಲ. ಆದರೂ ಪ್ರತಿಬಿಂಬಿಸುತ್ತಿದ್ದೇವೆ ಎಂಬ ಭಾವವೇ ಧನ್ಯತೆಯನ್ನುಂಟುಮಾಡುತ್ತದೆ. ಅಂತೆಯೇ ಪರಮಪೂಜ್ಯ ಶ್ರೀಮದ್ ಗಂಗಾಧರೇಂದ್ರಸರಸ್ವತೀ ಮಹಾಸ್ವಾಮಿಗಳವರ ವ್ಯಕ್ತಿತ್ವವೆಂಬ ಸೂರ್ಯನನ್ನು ಪ್ರತಿಬಿಂಬಿಸುವ ಪುಟ್ಟ ಕನ್ನಡಿಯಾಗಿ ನನ್ನ ಈ ಮಾತುಗಳು ಸಲ್ಲುತ್ತವೆಯಾದರೆ, ಅದುವೇ ಧನ್ಯತೆಯ ಸ್ಥಾನವಾಗಿದೆ. ಶ್ರೀ ಶಂಕರರಂತೆ ದಿವ್ಯಲಕ್ಷಣಗಳಿಂದ ಕಂಗೊಳಿಸುವ ವಿಶಿಷ್ಟವಾದ ಶರೀರದ ನಿಲುವಿನಿಂದಲೂ, ನೋಟದಿಂದಲೇ ಭಕ್ತಜನತೆಯಲ್ಲಿ ಸದ್ಭಾವನೆಯನ್ನು ಜಾಗ್ರತಗೊಳಿಸಬಲ್ಲ ತೇಜಃಪುಂಜದಂತಿರುವ ಕಣ್ಣುಗಳಿಂದಲೂ, ದಂಡ-ಕಂಡಲುಗಳಿಂದಲೂ ಸದಾ ಪರಿಶೋಭಿತವಾದ ಶ್ರೀ ಶ್ರೀಗಳವರ ದಿವ್ಯ-ಭವ್ಯ ರೂಪವನ್ನು ಮತ್ತೊಮ್ಮೆ-ಇನ್ನೊಮ್ಮೆ ಮನಸ್ಸಿನಲ್ಲಿ ಧಾರಣೆ ಮಾಡುತ್ತಾ ಈ ವಾಕ್ಯಕುಸುಮಗಳನ್ನು ಅವರ ಪಾದಕಮಲಗಳಲ್ಲಿ ಸಮರ್ಪಿಸುತ್ತೇನೆ.